ವಿಮರ್ಶೆಯೇ ಅಪೂರ್ಣವಾಗಿದೆ ಎನ್ನಿಸುತ್ತದೆ. ಚಂಪಾ ಅವರ ಬಹಿರ್ಮುಖವಷ್ಟೇ ಕಾಣಿಸಿ, ಅಂತರ್ಮುಖದಲ್ಲಿ ಮೂಡಿದ ಬದುಕಿನ ಗಂಭೀರ ಆಯಾಮಗಳ ಅಭಿವ್ಯಕ್ತಿಯನ್ನು ಹೆಚ್ಚು ಪರಿಶೀಲಿಸಿಲ್ಲ. ಏಕಾಂತ ಮತ್ತು ಲೋಕಾಂತಗಳು ಒಂದಾಗಿಯೇ ಅಭಿವ್ಯಕ್ತಿಯ ಅನನ್ಯತೆ ಸಾಧ್ಯವಾಗುತ್ತದೆ ಎಂಬುದಕ್ಕೆ ಅವರ ಅನೇಕ ಕವಿತೆಗಳು, ಕೆಲವು ನಾಟಕಗಳು ಸಾಕ್ಷಿಯಾಗಿವೆ; ಆತ್ಮಸಾಕ್ಷಿಯೂ ಆಗಿವೆ. ನವ್ಯ ಸಾಹಿತ್ಯದ ಸಂದರ್ಭದಲ್ಲೇ ಬಂದ ಅವರ ಕೆಲವು ಕವನಗಳು ಕಾವ್ಯದ ಲಯಗಾರಿಕೆಯನ್ನು ಕಾಪಾಡಿಕೊಂಡಿದ್ದಲ್ಲದೇ ಬಂಡಾಯ ಸಾಹಿತ್ಯದ ಸಂದರ್ಭದಲ್ಲೂ ವಿಸ್ತಾರಗೊಂಡಿದ್ದನ್ನು ಕಾಣಬಹುದು. ಅಣಕಿನಂತೆ ಇರುವ ತುಣುಕುಗಳಲ್ಲಿ ಕಾಣುವ ಚಂಪಾ ಅವರು ಅದಷ್ಟೇ ಆಗಿರಲಿಲ್ಲ. ಕವಿತೆ ಹೇಗೆ ಹುಟ್ಟಬೇಕೆಂಬ ಬಗೆಗಿನ ಗ್ರಹಿಕೆ ಕುರಿತಂತೆ ಅವರದೇ ಕವಿತೆಯ ಒಂದು ಭಾಗವನ್ನು ನೋಡಿ:

‘ಕೊನೆಯ ಸಾಧನವೆಂದು ಕವನ ಕನ್ಯೆಯ ಕರೆದೆ:
‘ಬಾ ರಾಣಿ ನಿನಗೀಗ ನಾನೇ ನಲ್ಲ’
ಕೋಲನೂರುತ ಬಂದು ತಿಳಿ ಹೇಳಿದಳು ಅವಳು:
‘ಮೊಮ್ಮಗ ನಾನೀಗ ಕನ್ಯೆಯಲ್ಲ’ (ಮಧ್ಯಬಿಂದು)

ಮೇಲ್ನೋಟಕ್ಕೆ ಚಮತ್ಕೃತಿಯಂತೆ ಕಾಣುವ ಸಾಲುಗಳು ಕಾವ್ಯಾಭಿವ್ಯಕ್ತಿಗೆ ಇರಬೇಕಾದ ಅನುಭವ ಸಾಂದ್ರತೆ ಮತ್ತು ಮಾಗುವಿಕೆಯನ್ನು ಧ್ವನಿಸುತ್ತವೆ. ‘ಕವಿ’ ಚಂಪಾ ಇಂಥ ಕಡೆ ಕಾಣಿಸುತ್ತಾರೆ.

ಚಂಪಾ ಅವರು ಬದುಕನ್ನು ಕಂಡ ಪರಿಯಲ್ಲೂ ವಿಭಿನ್ನರಾಗಿದ್ದಾರೆ. ‘ಬಂಡಾಯ’ ಎಂದ ಕೂಡಲೇ ‘ಹೂವು, ಹೆಣ್ಣು, ತಾರೆ’ಗಳ ಬಗ್ಗೆ ಬರೆಯಬೇಕಾಗಿಲ್ಲವೆಂದು ಭಾವಿಸದೆ, ಪ್ರೀತಿಪರ ಪ್ರತಿಪಾದನೆಯ ಜೊತೆಗೆ ಶಾಲ್ಮಲೆಯ ರೂಪಕದಲ್ಲಿ ಬದುಕಿನ ವೈವಿಧ್ಯವನ್ನು ಕಾಣುತ್ತಾರೆ. ಧಾರವಾಡದ ಏಳು ಗುಡ್ಡಗಳ ಗರ್ಭದಲ್ಲಿ ಹರಿಯುತ್ತದೆ ಎನ್ನಲಾದ ಒಂದು ಗುಪ್ತಗಾಮಿನಿ ನದಿಯೇ ‘ಶಾಲ್ಮಲಾ.’ ಚಂಪಾ ‘ಶಾಲ್ಮಲಾ ನನ್ನ ಶಾಲ್ಮಲಾ’ ಸಂಕಲನದಲ್ಲಿ ಹೀಗೆ ನುಡಿಯುತ್ತಾರೆ:

‘ಉಳಿದ ನದಿಗಳ ಹಾಗೆ ನೀನಲ್ಲ ಶಾಲ್ಮಲೆ
ನಿನ್ನ ಕಂಡವರಿಲ್ಲ, ನಿನ್ನೊಳಗೆ ಮೈಯ ತೊಳಕೊಂಡವರಿಲ್ಲ
ನಿನ್ನ ಉಂಡವರಿಲ್ಲ, ನಿನ್ನೊಳಗೆ ಕಳಕೊಂಡವರಿಲ್ಲ
ಉಗಮವೆಲ್ಲೊ ನಿನ್ನದು ನಿನ್ನ ಸಂಗಮವೆಲ್ಲೋ
ನೀನು ಹರಿಯುತಿರುವುದು ಮಾತ್ರ ಒಂದೇ ಖರೆ. ಬಹುಶಃ
ನಾನು ಬದುಕಬೇಕೆಂದಿರುವ ಬದುಕಿನಂತೆ
ನಾನು ಬರೆಯಬೇಕೆಂದಿರುವ ಕಾವ್ಯದಂತೆ’ (ಉಳಿದ ನದಿಗಳ ಹಾಗೆ)

ಶಾಲ್ಮಲಾ ಎಂಬ ನಿಗೂಢ ನದಿಯು ಚಂಪಾ ಅವರಿಗೆ ಬದುಕು ಮತ್ತು ಕಾವ್ಯ ಎರಡಕ್ಕೂ ಚಲನಶೀಲ ರೂಪಕವಾಗಿದೆ. “ಶಾಲ್ಮಲಾ ನನ್ನ ಶಾಲ್ಮಲಾ” ಕವಿತೆಯಲ್ಲಿ ಈ ರೂಪಕಾತ್ಮಕ ಭಾವ ಮತ್ತಷ್ಟು ಸ್ಪಷ್ಟವಾಗುತ್ತದೆ:

‘ಎಲ್ಲೋ ಹುಟ್ಟಿ ಎಲ್ಲೋ ಬೆಳೆದು
ಒಳಗೊಳಗೇ ಹರಿಯುವವಳು
ಜೀವ ಹಿಂಡಿ ಹಿಪ್ಪೆ ಮಾಡಿ
ಒಳಗೊಳಗೇ ಕೊರೆಯುವವಳು
ಸದಾ ಗುಪ್ತ ಗಾಮಿನಿ
ನನ್ನ ಶಾಲ್ಮಲಾ’